ಸಿ.ಸಿ ನಂಬ್ರಃ 1025/2023
ಡಿ.ಡಬ್ಲ್ಯೂ : 1

ದಿನಾಂಕಃ 10-03-2026 ರಂದು ಸಾಕ್ಷಿಗೆ ಪ್ರಮಾಣ ವಚನ ಮಾಡಿಸಲಾಗಿದೆ

ಪಾಟೀ ಸವಾಲು: ಪಿರ್ಯಾದಿದಾರರ ಪರ ಶ್ರೀ ಆರ್.ಕೆ. ಎಮ್ ವಕೀಲರಿಂದ

1. ನಾನು MBBS ಪದವಿಧರ. ನಾನು 2002 ರಲ್ಲಿ ವಿದ್ಯಾಭ್ಯಾಸ ಮುಗಿಸಿರುತ್ತೇನೆ. ಈ ಪ್ರಕರಣದ ಚೆಕ್ ಗಳನ್ನು ಇಲ್ಲಿಯವರೆಗೆ ನಾನು ನೋಡಿರುವುದಿಲ್ಲ. ಎರಡು ಚೆಕ್ ಲಿಪ್‌ಗಳು ನನಗೆ ಸಂಬಂಧಪಟ್ಟಿದ್ದು. ಬ್ಯಾಂಕಿನವರು ಆ ಚೆಕ್ ಲಿಪ್ ಗಳನ್ನು ನನಗೆ ಕೊಟ್ಟಿರುತ್ತಾರೆ ಎಂದರೆ ಸರಿ. ಕೆನರಾ ಬ್ಯಾಂಕ್ ಶೇಷಾದ್ರಿಪುರಂ ಬ್ಯಾಂಕಿಗೆ ಸಂಬಂಧಪಟ್ಟ ಚೆಕ್ ಗಳಾಗಿರುತ್ತದೆ. ಆ ಖಾತೆಯನ್ನು ನಾನು 2000 ರಲ್ಲಿ ತೆಗೆದಿರಬಹುದು. ನಾನು ಈ ಎರಡು ಚೆಕ್ ಗಳನ್ನು ಮೇ 7 ತಾರೀಖು ನನ್ನ ಮಾಜಿ ಪತ್ನಿ ದೀಪಾ ಪಟವಾಲ್ ರವರಿಗೆ ಕೊಟ್ಟಿದ್ದೆ.

2. ನಾನು ಪದೇ ಪದೇ ಡೆಲ್ಲಿಗೆ ಹೋಗುತ್ತಿದ್ದು ಎಕ್ಸಾಮ್‌ನ ವಿಚಾರವಾಗಿ ಹೋಗುತ್ತಿದ್ದು ನಮ್ಮ ಮನೆಯ ಬಾಡಿಗೆಯ ವಿಚಾರವಾಗಿ ಆಕೆಗೆ ಕೊಟ್ಟು ಹೋಗಿರುತ್ತೇನೆ. ನಿ.ಪಿ.1 ಮತ್ತು 2 ರಲ್ಲಿರುವ ಸಹಿಗಳು ನನ್ನದೇ ಇರುತ್ತದೆ. ಆಕೆ ಆ ಎರಡು ಚೆಕ್ ಗಳನ್ನು ನನ್ನ ಜ್ಞಾನಕ್ಕೆ ತಿಳಿದಂತೆ ಆಕೆ ತೆಗೆದುಕೊಂಡಿರುತ್ತಾಳೆ. ಅದು ನನಗೆ ತಿಳಿದಿರುತ್ತದೆ. ಆಕೆ ನನ್ನ ಚೆಕ್ ನ್ನು ತೆಗೆದುಕೊಂಡಾಗ ನನಗೆ ಆಕ್ಷೇಪ ಇರಲಿಲ್ಲ. ನಾನು ನನ್ನ ತಾಯಿಗೆ ಕೊಡಬೇಕೆಂದು ಹೇಳಿ ಆ ಚೆಕ್ ನ್ನು ಅವರಿಗೆ ಕೊಟ್ಟಿರುತ್ತೇನೆ. ನಾವು ಬ್ಯಾಂಕಿಗೆ ಹೋದಾಗ ಆ ಎರಡು ಚೆಕ್ ಲಿಪ್‌ಗಳನ್ನು ಆಕೆಯೇ ತೆಗೆದುಕೊಂಡಿರುತ್ತಾಳೆ. ನಾನು ತಾನಾಗಿಯೇ ಕೊಟ್ಟಿರುವುದಿಲ್ಲ. ನಾನು ಬ್ಯಾಂಕಿಗೆ ಸ್ಟಾಪ್ ಪೇಮಂಟ್ ಸೂಚನೆ ಕೊಟ್ಟಿರುವುದಿಲ್ಲ.

3. ನಾನು ವಿಚ್ಛೇದನಾ ಸಮಯದಲ್ಲಿ ಎಮ್‌ಒಯು ಗೆ ಸಹಿ ಮಾಡಿದ್ದರಿಂದ ಆ ಚೆಕ್ ನ್ನು ಸ್ಟಾಪ್ ಪೇಮಂಟ್ ಮಾಡಲು ಯಾವುದೇ ಕ್ರಮ ಕೈಗೊಂಡಿರುವುದಿಲ್ಲ. ಆಕೆ ಅದನ್ನು ವಾಪಾಸು ಕೊಡುತ್ತೇನೆ ಎಂದು ಒಪ್ಪಿಕೊಂಡಿದ್ದಳು. ಇದುವರೆಗೂ ನಾನು ಆ ಎರಡು ಚೆಕ್ ನ್ನು ತೆಗೆದುಕೊಳ್ಳಲು ಕ್ರಮ ಕೈಗೊಂಡಿರುವುದಿಲ್ಲ. ಈ ಪ್ರಕರಣದಲ್ಲಿ ಹಾಜರಾದ ನಂತರವೂ ಸಹ ಆಕೆಯ ವಿರುದ್ಧ ಕಾನೂನು ಕ್ರಮ ಕೈಗೊಂಡಿರುವುದಿಲ್ಲ. ಕ್ರಮ ಕೈಗೊಳ್ಳಲು ಆಕೆ ಎಲ್ಲಿ ಇರುತ್ತಾಳೆ ಎಂದು ಗೊತ್ತಿರುವುದಿಲ್ಲ.

4. ಈ ಪ್ರಕಣದಲ್ಲಿ ಹಾಜರಾದ ನಂತರ ಪಿರ್ಯಾದಿದಾರಳ ವಿರುದ್ಧ ಯಾವುದೇ ದೂರನ್ನು ಪೊಲೀಸ್ ಠಾಣೆಯಲ್ಲಿ ದಾಖಲು ಮಾಡಿರುವುದಿಲ್ಲ ಹಾಗೂ ಕಾನೂನು ಕ್ರಮ ಕೈಗೊಂಡಿರುವುದಿಲ್ಲ. ನಾನು ಚೆಕ್ ಅಮಾನ್ಯ ಪ್ರಕರಣ ತಪ್ಪು ಎಸಗಿರುವುದರಿಂದ ಪಿರ್ಯಾದಿದಾರರ ವಿರುದ್ಧ ಯಾವುದೇ ಕ್ರಮ

ಕೈಗೊಂಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಮೈಸೂರುನಲ್ಲಿ ವಾಸ ಇರಲಿಲ್ಲ, ಬೆಂಗಳೂರಿನಲ್ಲಿ ವಾಸ ಇದ್ದೆ ಎಂದು ನುಡಿಯುತ್ತಾರೆ.

5. ಆಕೆ ನನ್ನ ಚೆಕ್ ಗಳನ್ನು ತೆಗೆದುಕೊಂಡಾಗ ಬಾಡಿಗೆ ಹಣ ಕಟ್ಟಲು ನನ್ನ ತಾಯಿ ಕಲಾವತಿ ಶ್ರೀನಿವಾಸ್ ರವರಿಗೆ ಚೆಕ್ ನ್ನು ಕೊಡುತ್ತೇನೆ ಎಂದು ಹೇಳಿ ತೆಗೆದುಕೊಂಡಿದ್ದಳು. ದಿನಾಂಕ 09-05-2008 ರಂದು ಮನೆಯಿಂದ ಹೋಗಿರುತ್ತಾಳೆ. ಅದು ಬೆಂಗಳೂರಿನ ಮನೆಯ ಬಾಡಿಗೆ ಕೊಡಬೇಕಿತ್ತು. ಮನೆಯ ಒನರ್ ಶ್ರೀವಾಸ್ತವ ಎಂದು ಇದ್ದರು. ಮನೆಯ ಬಾಡಿಗೆ 14 ಸಾವಿರ, ಎಲ್ಲಾ ಬೇರೆ ನೀರಿನ ಬಾಕಿ, ವಿದ್ಯುತ್ ಬಿಲ್ಲು ಸೇರಿ 3 ರಿಂದ 4 ಸಾವಿರ ಇತ್ತು, ಲಫ್ಟ್ ಎರಿಯಾ ಮೈಂಟೆನೆನ್ಸ್ ಸೇರಿ 2000 ಇತ್ತು. ಒಟ್ಟು ಸುಮಾರು ತಿಂಗಳಿಗೆ 20 ಸಾವಿರ ರೂ. ಬಾಡಿಗೆ ಕೊಡಬೇಕಿತ್ತು.

6. ನನ್ನ ತಾಯಿಗೆ ಆ ಚೆಕ್ ನ್ನು ಕೊಟ್ಟಿರುವುದಿಲ್ಲ. ಅವಳಿಗೆ ಚೆಕ್ ಕೊಟ್ಟ ನಂತರ ನನ್ನ ತಾಯಿಯನ್ನು ನಾನು ಬೇಟಿ ಆಗಿರುತ್ತೇನೆ. ನನ್ನ ತಾಯಿಗೆ ನೇರವಾಗಿ ಚೆಕ್ ನ್ನು ಕೊಡಲು ತೊಂದರೆ ಇರಲಿಲ್ಲ. 20 ಸಾವಿರ ರೂ. ಕೊಡಲು ಎರಡು ಚೆಕ್ ಲಿಪ್ ಗಳನ್ನು ಕೊಡುವ ಅಗತ್ಯ ಇರಲಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಅವರಿಗೆ ಅಗತ್ಯ ಇತ್ತು ಎಂದು ನುಡಿಯುತ್ತಾರೆ. ಚೆಕ್ ಬೌನ್ಸ್ ಪ್ರಕರಣದಲ್ಲಿ ಪಿರ್ಯಾದಿಗೆ ಹಣ ಕೊಡುವುದು ಬಾಕಿ ಇದ್ದು ಅದರಿಂದ ತಪ್ಪಿಸಿಕೊಳ್ಳುವ ಸಲುವಾಗಿ ಒಂದು ಸುಳ್ಳು ನೆಪ ಕೊಡುತ್ತಿದ್ದೇನೆ ಎಂದರೆ ಸರಿಯಲ್ಲ.

7. 2008 ರ ಜೂನ್ ಹಾಗೂ ಜುಲೈ ತಿಂಗಳ ಬಾಡಿಗೆ ಕೊಡಬೇಕಿತ್ತು. ತಿಂಗಳು ತಿಂಗಳು ಬಾಡಿಗೆ ಸರಿಯಾಗಿ ಕಟ್ಟಬೇಕು ಎಂದರೆ ಸರಿ. ನಾನು ಅವರಿಗೆ ಆ ತಿಂಗಳ ಬಾಡಿಗೆ ಕೊಟ್ಟಿರುತ್ತೇನೆ. ಜೂನ್ ಹಾಗೂ ಜುಲೈ ನಲ್ಲಿ ನನ್ನ ತಾಯಿ ಹಣವನ್ನು adjust ಮಾಡಿ ಮಾಲೀಕರಿಗೆ ಕೊಟ್ಟಿರುತ್ತಾರೆ. ಬ್ಲಾಂಕ್ ಚೆಕ್ ನಲ್ಲಿ ಸಹಿ ಮಾಡಿ ಕೊಡುವುದು ತಪ್ಪು ಎಂದು ನನಗೆ ಗೊತ್ತಿರುತ್ತದೆ. ಆ ನಂತರ ತಿಂಗಳು ತಿಂಗಳು ಬಾಡಿಗೆಯನ್ನು ಮಾಲೀಕರಿಗೆ ನಾನೇ ಕೊಟ್ಟಿರುತ್ತೇನೆ. ಆ ಚೆಕ್ ನ್ನು ನಾನು ವಾಪಾಸು ತೆಗೆದುಕೊಳ್ಳಬೇಕೆಂದು ಕೇಳಿರುತ್ತೇನೆ. ಆ ರೀತಿ ಅನ್ನಿಸಿರುತ್ತದೆ. ಆಕೆ ನನಗೆ ಚೆಕ್ ನ್ನು ಕೊಡುತ್ತೇನೆ ಎಂದು ಹೇಳಿದ್ದಳು.

8. ನಾನು ಒಂದು ತಿಂಗಳು ಕೇಳಿರುತ್ತೇನೆ. ಅದಾದ ನಂತರ ಆಕೆಗೆ ಬೇಕೆಗೆ ಸಂಬಂಧ ಇದೆ ಎಂದು ಗೊತ್ತಾದ ನಂತರ ಸರೋಜ್ ಪಟವಾಲ್ ರವರು ಮಾತನಾಡಬೇಡಿ, ನಾನು ಸರಿ ಮಾಡುತ್ತೇನೆ ಎಂದು ಹೇಳಿರುತ್ತಾರೆ, ಆ ನಂತರ ಅವರು ನನಗೆ ಮಾತನಾಡಲು ಬಿಟ್ಟಿರುವುದಿಲ್ಲ. ನಮ್ಮ ವಿವಾಹ ವಿಚ್ಚೇದನಾ ಪರಸ್ಪರ ಒಪ್ಪಿಗೆಯಿಂದ ಆಗಿರುತ್ತದೆ. ಆಕೆಗೆ ಬೇರೆ ಸಂಬಂಧ ಇದ್ದ ಬಗ್ಗೆ ಯಾವುದೇ ದಾಖಲೆಗಳು ಕಾಣಿಸಿರುವುದಿಲ್ಲ. ನ್ಯಾಯಲಯದ ಮುಂದೆ ಪರಸ್ಪರ ಒಪ್ಪಿಗೆ ವಿವಾಹ ವಿಚ್ಚೇದನಾ ಪಡೆದುಕೊಳ್ಳುವಾಗ ನನ್ನ ಚೆಕ್‌ಗಳು ಆಕೆಯ ಬಳಿ ಇದ್ದ ಬಗ್ಗೆ ವಿಚ್ಚೇದನಾ ಅರ್ಜಿಯಲ್ಲಿ

ಕಾಣಿಸಿರುವುದಿಲ್ಲ, ಆದರೆ ನಾವಿಬ್ಬರೂ ಎಮ್ ಒ ಯು ಮಾಡಿಕೊಂಡಿದ್ದು ಅದರಲ್ಲಿ ಇದೆ ಎಂದು ನುಡಿಯುತ್ತಾರೆ. ಯಾವುದೇ ಎಮ್‌ಒಯು ಆಗಿದ್ದು ಇಲ್ಲ, ಆದ್ದರಿಂದ ನ್ಯಾಯಲಯದ ಮುಂದೆ ಹಾಜರು ಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಕಳೆದ ಬಾರಿ ಮುಖ್ಯ ವಿಚಾರಣೆಯಲ್ಲಿ ನನ್ನ ಮದುವೆ ಹಾಗೂ ವಿಚ್ಚೇದನಾ ಬಗ್ಗೆ ಅನಗತ್ಯವಾಗಿ ಹೇಳಿರುತ್ತೇನೆ ಎಂದರೆ ಸರಿಯಲ್ಲ.

9. ನೋಟಿಸನ್ನು ನನ್ನ ಸರಿಯಾಗಿ ವಿಳಾಸಕ್ಕೆ ಕಳುಹಿಸಲಾಗಿರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಚೆಕ್ ನಲ್ಲಿ ನಮೂದಿಸಿರುವ 10 ಲಕ್ಷವನ್ನು ನಾನು ಸರೋಜ ಪಟವಾಲರವಂರಿದ ಸಾಲ ಪಡೆದಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ಪಡೆದಿಲ್ಲ ಎಂದು ನುಡಿಯುತ್ತಾರೆ. ನನ್ನ ವೈವಾಹಿಕ ಜೀವನಕ್ಕೂ, ವಿವಾಹ ವಿಚ್ಚೇದನಾ ಪ್ರಕರಣಕ್ಕೂ ಹಾಗೂ ಈ ಚೆಕ್ ಪ್ರಕರಕ್ಕೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ಇದು ನನ್ನ ಹಾಗೂ ಸರೋಜ ಪಟವಾಲ್ ರವರ ಮಧ್ಯೆ ಆದ ವ್ಯಯಕ್ತಿಕ ವ್ಯವಹಾರ ಎಂದರೆ ಸರಿಯಲ್ಲ. ನನ್ನ ಹಾಗೂ ಸರೋಜ ಪಟವಾಲ್ ರವರ ನಡುವೆ ಆದ ಸ್ವತಂತ್ರ ವ್ಯವಹಾರ ಆಗಿದ್ದು ನನಗೂ ಹಾಗೂ ನನ್ನ ವೈವಾಹಿಕ ಸಂಬಂದಕ್ಕೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ.

10. ಯಾವುದೇ ಒಂದು ಚೆಕ್ ನ್ನು ಬಳಸಬಾರದು ಎಂದರೆ ಬ್ಯಾಂಕಿಗೆ ಸ್ಟಾಪ್ ಪೇಮೆಂಟ್ ಸೂಚನೆ ಕೊಡಬಹುದು ಎಂದು ನನಗೆ ಗೊತ್ತಿರುತ್ತದೆ. ಈ ಪ್ರಕರಣದಲ್ಲಿ ಅವರು ಕಳುಹಿಸಿದ ನೋಟಿಸು ನನಗೆ ತಲುಪಿರುತ್ತದೆ ಎಂದರೆ ಸರಿಯಲ್ಲ. ನಾನು ಆ ನೋಟಿಸನ್ನು ಸ್ವೀಕರಿಸಿ ಸ್ವೀಕೃತಿ ಪತ್ರಕ್ಕೆ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಇಂದ್ರನಗರದಲ್ಲಿರುವ ಕೋಲಂಬಿಯಾ ಆಸ್ಪತ್ರೆಯಲ್ಲಿ ಮ್ಯಾನಜ್‌ಮೆಂಟ್ ನಲ್ಲಿ ಕೆಲಸ ನಿರ್ವಹಿಸಿರುತ್ತೇನೆ. ನಾನು ನೋಟಿಸಿನಲ್ಲಿ ಹೇಳಿರುವ ವಿಳಾಸವಾದ ಮೈಸೂರಿನ ಗೋಲ್ಡನ್ ಟೆಂಪಲ್ ಆಸ್ಪತ್ರೆಯಲ್ಲಿ ಕೆಲಸ ನಿರ್ವಹಿಸಿರುತ್ತೇನೆ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ.

11. ಆ ಬುಕ್ ನಲ್ಲಿ ಇದ್ದ ಉಳಿದ ಎಲ್ಲಾ ಚೆಕ್ ಲಿಪ್ ಗಳನ್ನು ಬಳಸಿರುತ್ತೇನೆ. ಹೊಸ ಚೆಕ್ ಬುಕ್ ಪಡೆದು ಅದನ್ನು ಸಹ ಬಳಸಿರುತ್ತೇನೆ. ಸರೋಜ ಪಟವಾಲ್ ರವರು ಈ ಪ್ರಕಣದಲ್ಲಿ ಏನೆಲ್ಲಾ ದಾಖಲಾತಿ ಕೊಟ್ಟಿರುತ್ತಾರೆ ಎಂದು ನೋಡಿರುವುದಿಲ್ಲ. ದೂರುದಾರಳು ಎಲ್ಲಾ ನ್ಯಾಯಯುತವಾದ ದಾಖಲಾತಿ ಬಳಸಿದ್ದು ನಾನು ಅವುಗಳನ್ನು ನೋಡಿದ್ದರೂ ಸಹ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ನಾನು ಎಲ್ಲಾ ದಾಖಲೆಗಳನ್ನು ನೋಡಿರುತ್ತೇನೆ ಎಂದು ನುಡಿಯುತ್ತಾರೆ. ನಾನು ದೂರುದಾರಳಿಂದ ದೂರಿನಲ್ಲಿ ಹೇಳಿದ ರೀತಿಯಲ್ಲಿ ವ್ಯವಹಾರ ಮಾಡಿ ಸಾಲವನ್ನು ಪಡೆದಿರುತ್ತೇನೆ ಎಂದರೆ ಸರಿಯಲ್ಲ.

12. ಎರಡು ಚೆಕ್ ಗಳು insufficient fund ಎಂದು ಅಮಾನಿಕರಣ ಆಗಿರುತ್ತದೆ. ಆ ಚೆಕ್ ಗಳನ್ನು ನನ್ನ ಬ್ಯಾಂಕಿಗೆ ಖಾತೆಗೆ ಹಾಕಿದಾಗ ನನ್ನ ಖಾತೆಯಲ್ಲಿ ಹಣ ಇರಲಿಲ್ಲ. ಸಾಕ್ಷಿ ಅವರು ಆ ಚೆಕ್ ಗಳನ್ನು

ಹಾಕುತ್ತಾರೆ ಎಂದು ನನಗೆ ಗೊತ್ತಿರಲಿಲ್ಲ ಎಂದು ನುಡಿಯುತ್ತಾರೆ. ನಾನು ಎಮ್ ಒ ಯು ಮಾಡಿದಾಗ ಆ ಎರಡು ಚೆಕ್ ಗಳನ್ನು ವಾಪಾಸು ಪಡೆದುಕೊಳ್ಳಲು ನಮೂದು ಆಗಿರುತ್ತದೆ. ಅವರು ವಾಪಾಸು ಕೊಡುತ್ತೇನೆ ಎಂದು ಹೇಳಿದ್ದರು. ಅವರಿಗೆ ಕರೆ ಮಾಡಿರುತ್ತೇನೆ. ಅವರ ಫೋನ್ ಸ್ವಿಚ್ ಆಫ್ ಬಂದಿರುತ್ತದೆ. ಮತ್ತೆ ಕರೆ ಮಾಡಿರುವುದಿಲ್ಲ. ಎಮ್ ಒಯು ಶುದ್ದ ಸುಳ್ಳು ದಾಖಲೆ ಎಂದರೆ ಸರಿಯಲ್ಲ. ಅದನ್ನು ನೋಟರಿ ಮಾಡಿರುವುದಿಲ್ಲ.

13. ಆ ಎಮ್‌ಒಯು ಗೆ ಅವರ ಸ್ನೇಹಿತರಿದ್ದರು. ಆ ಸ್ನೇಹಿತರು ಯಾರು ಎಂದು ಗೊತ್ತಿರುವುದಿಲ್ಲ. ಎಮ್ ಒ ಯು ನ ಸಾಕ್ಷಿದಾರರನ್ನು ನಾನು ವಿಚಾರಣೆ ಮಾಡುವುದಿಲ್ಲ. ಅದು ಸುಳ್ಳಿನ ದಾಖಲೆ ಆಗಿದ್ದರಿಂದ ನನ್ನ ಬಳಿ ಯಾವುದೇ ಸಾಕ್ಷಿದಾರರು ಇಲ್ಲ ಎಂದರೆ ಸರಿಯಲ್ಲ. ನಾನು ನನ್ನ ಹೆಂಡತಿಗೆ ಕೊಟ್ಟ ಚೆಕ್ ಗಳನ್ನು ಆಕೆ ಅವರ ತಾಯಿಗೆ ಕೊಟ್ಟಿರಬಹುದು. ಹಾಗಾಗಿ ಆ ಚೆಕ್ ಗಳು ಪಿರ್ಯಾದಿದಾರರ ಕೈಗೆ ಹೋಗಿರಬಹುದು. ನನಗೆ ಈ ಪ್ರಕರಣದಲ್ಲಿ ಇಬ್ಬರು ಸಹ ಮೋಸ ಮಾಡಿರುತ್ತಾರೆ. ನಾನು ಚೆಕ್ ಅಮಾನ್ಯತೆಯ ಅಪರಾಧ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಅದರಿಂದ ಹೊರಗೆ ಬರಲು ಸುಳ್ಳು ಕಾರಣಗಳನ್ನು ಸುಳ್ಳು ಕತೆಗಳನ್ನು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

14. ನನ್ನ ವೈವಾಹಿಕ ಜೀವನದಲ್ಲಿ ನನ್ನ ಹೆಂಡತಿಯ ಏನು ತಪ್ಪು ಇರುವುದಿಲ್ಲ ಎಂದರೆ ಸರಿಯಲ್ಲ. ಸುಳ್ಳು ಆರೋಪ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಆಕೆಗೆ ತೊಂದರೆ ಕೊಟ್ಟಿರುವುದರಿಂದ ಸಮ್ಮತಿ ವಿಚ್ಛೇದನಾ ಅರ್ಜಿ ಪಡೆದುಕೊಂಡಿರುತ್ತೇವೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

ಓ.ಹೇ.ಕೇ.ಸ.ಇದೆ                ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಗಿದೆ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಕುಂದಾಪುರ